# 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಮೈಸೂರು

## ಎಸ್.ಸಿ. / 321/2017

| | | |
|---|---|---|
| **ಫಿರ್ಯಾದುದಾರರು :** | | ಕರ್ನಾಟಕ ರಾಜ್ಯ ಸರ್ಕಾರ<br>ಲಕ್ಷ್ಮಿಪುರಂ ಪೊಲೀಸ್ ಠಾಣೆ,<br>ಮೈಸೂರು ನಗರ. |

– ವಿರುದ್ಧ –

| | | |
|---|---|---|
| **ಆರೋಪಿತರುಃ** | | ಶ್ರೀ ಮಂಜುನಾಥ ಸುರೇಶ್ ಗೌಡ<br>ಬಿನ್ ರೇಣುಕೇಗೌಡ ,<br>45 ವರ್ಷ,<br>ವಾಸಃ– 10/15, ಉಗರಗೋಳ್ ಗ್ರಾಮ<br>ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ. |

## ದಂ. ಪ್ರ.ಸಂ. ಕಲಂ 313 ರಡಿ ಆರೋಪಿತರ ಹೇಳಿಕೆ

1) ಅಭಿಯೋಜನೆ ಪರವಾಗಿ ಈ ಕೇಸಿನಲ್ಲಿ ನುಡಿದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿರುವಿರಾ ? ಉತ್ತರ – ಆ )

2) ಫ್ರಾಸಾ–3 ಮಹದೇವ ಮೂರ್ತಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ತನಗೆ ಆರೋಪಿತನ ಪರಿಚಯ ಇರುತ್ತದೆ. ಆರೋಪಿತನು ತನ್ನ ಸ್ನೇಹಿತ ಶ್ರೀಕಾಂತ ಚಾ.ಸಾ.5 ಇವರ ಮುಖಾಂತರ ಪರಿಚಯ ಆಗಿರುತ್ತಾನೆ. ತಾನು 2010 ರಲ್ಲಿ ರೇಲ್ವೆ ಇಲಾಖೆಯಲ್ಲಿ ಟಿಕೇಟ್ ಕಲೆಕ್ಟರ್ ಹುದ್ದೆಗಾಗಿ ಅರ್ಜಿ ಸಲ್ಲಿಸಿದ್ದೆನು. ತನ್ನ ಜೊತೆ ಇನ್ನೂ 5 ಜನ ನನ್ನ ಸ್ನೇಹಿತರು ಅಂದರೆ ಒಟ್ಟು 6 ಜನರು ಅರ್ಜಿ ಸಲ್ಲಿಸಿದ್ದೆವು. ಉದ್ಯೋಗ ಸುಲಭವಾಗಿ ಸಿಗುವುದಿಲ್ಲ, ಯಾರದರ ಮುಖಾಂತರ ಉದ್ಯೋಗ ಪಡೆದುಕೊಳ್ಳಬೇಕು

ಎಂದು ನನ್ನ ಸ್ನೇಹಿತ ಈತನ ಮುಖಾಂತರ ಆರೋಪಿಯನ್ನು ಪರಿಚಯ ಮಾಡಿಕೊಂಡಿರುತ್ತೇನೆ. ಆರೋಪಿಯ ಜೊತೆ ಇನ್ನೂ ಇಬ್ಬರೂ ದುಂಡಪ್ಪ ಮೆಟ್ಟಪ್ಪ ಗಡ್ಕರಿ ಮತ್ತು ಸಂಗಪ್ಪ ಬಂಡಿ ಇವರ ಪರಿಚಯ ಕೂಡ ಆಗಿತ್ತು. ಸದರಿ 3 ಜನ ಅಂದರೆ ಆರೋಪಿ ದುಂಡಪ್ಪ ಮೆಟ್ಟಪ್ಪ ಗಡ್ಕರಿ ಮತ್ತು ಸಂಗಪ್ಪ ಬಂಡಿ ಇವರು ಕೆಲಸ ಕೊಡಿಸುತ್ತೇವೆ ಆದರೆ ಲಕ್ಷಾಂತರ ರೂಪಾಯಿ ಕೊಡಬೇಕಾಗುತ್ತದೆ ಎಂದು ಹೇಳಿರುತ್ತಾರೆ. ಪ್ರತಿಯೊಬ್ಬರಿಗೆ 5 ಲಕ್ಷ ರೂಪಾಯಿ ಕೊಡಬೇಕು ಒಟ್ಟು 30 ಲಕ್ಷ ರೂಪಾಯಿ ಕೊಡಲು ಹೇಳಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

3) ಫ್ರಾಸಾ–3 ಮಹದೇವ ಮೂರ್ತಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ಸದರಿ ಮಾತುಕತೆ ಬೆಂಗಳೂರಿನಲ್ಲಿ ಆಗಿರುತ್ತದೆ. ನಂತರ ತಾನು ಉಳಿದ 5 ಜನ ಸ್ನೇಹಿತರೊಡನೆ ಚರ್ಚೆ ಮಾಡಿ ಪ್ರತಿಯೊಬ್ಬರು 5 ಲಕ್ಷ ರೂಪಾಯಿ ಕೊಡಲು ತೀರ್ಮಾನ ಮಾಡಿದೆವು. ನಾನು 5 ಲಕ್ಷ ರೂಪಾಯಿ ಮತ್ತು ಇನ್ನೂ ಉಳಿದ 5 ಜನ ಸ್ನೇಹಿತರು ತಲಾ 1 ಲಕ್ಷ ರೂಪಾಯಿ ಒಟ್ಟು 10 ಲಕ್ಷ ರೂಪಾಯಿ ಆರೋಪಿ ಮತ್ತು ದುಂಡಪ್ಪ ಮೆಟ್ಟಪ್ಪ ಗಡ್ಕರಿ ಮತ್ತು ಸಂಗಪ್ಪ ಬಂಡಿ ಇವರಿಗೆ ಬೆಂಗಳೂರಿಗೆ ಹೋಗಿ ಕೊಟ್ಟಿದ್ದೆವು. ನಂತರ ನಾವು ಸುಮಾರು ದಿನ ನಿರೀಕ್ಷೆ ಮಾಡಿದೆವು, ಆದರೆ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಅವರು ಭರವಸೆ ಕೊಡುತ್ತಿದ್ದರು, ಸ್ವಲ್ಪ ದಿನಗಳು ಆದ ನಂತರ ನಮಗೆ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ, ಫೋನ್ ಮಾಡಿದರೆ ರಿಸೀವ್ ಮಾಡುತ್ತಿರಲಿಲ್ಲ. ನಂತರ ತಾವು ಹಣ ಕೊಟ್ಟು ಹಾಳಾಗಿದೆವು ಎಂದು ಗಾಬರಿಯಾಗಿ ರವಿ ಎನ್ನುವ ರಾಜಕೀಯ ಮುಖಂಡನ ಮುಖಾಂತರ ಆರೋಪಿಗಳನ್ನು

ಸಂಪರ್ಕಿಸಿದೆವು. ಸುಮಾರು ದಿನಗಳು ಆದ ಮೇಲೆ ಆರೋಪಿ ಮತ್ತು ದುಂಡಪ್ಪ ಮೆಟ್ಟಪ್ಪ ಗಡ್ಕರಿ ಮತ್ತು ಸಂಗಪ್ಪ ಬಂಡಿ ಇವರನ್ನು ಭೇಟಿ ಮಾಡಿಸಿದರು. ಆಗ ಆರೋಪಿ ಮತ್ತು ಉಳಿದ ಇಬ್ಬರೂ ಇವರು ನಮಗೆ ಯಾವುದೇ ದುಡ್ಡನ್ನು ಕೊಟ್ಟಿಲ್ಲ ಎಂದು ಹೇಳಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

4) ಫ್ರಾಸಾ–3 ಮಹದೇವ ಮೂರ್ತಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ತಾವು ಫಿರ್ಯಾದಿ ಕೊಡುತ್ತೇವೆ ಎಂದು ಹೇಳಿದ್ದಕ್ಕೆ ಆರೋಪಿಗಳು ಹಣವನ್ನು ಕೊಡುತ್ತೇವೆ ಎಂದು ಭರವಸೆ ನೀಡಿದರು. ಸ್ವಲ್ಪ ದಿನ ಆದ ನಂತರ ರವಿಯವರು ತನ್ನ ಅಕೌಂಟ್ ಗೆ ಹಣ ಬಂದಿದೆ ಎಂದು ಮೂರುವರೆ ಲಕ್ಷ ರೂಪಾಯಿ ಜೂನ್ 2011 ರಲ್ಲಿ ತನಗೆ ಕೊಟ್ಟರು. ಉಳಿದ ಹಣ ಕೇಳಲು ಆರೋಪಿ ಸಮಯ ಕೇಳಿದ್ದನು. ಅದಕ್ಕೆ ಸ್ವಲ್ಪ ಸಮಯ ಆದ ನಂತರ ತಾವು ಫೋನ್ ಮಾಡಿ ಕೇಳುತ್ತಿದ್ದೆವು, ಅದಕ್ಕೆ ಅವರಿಂದ ಯಾವುದೇ ಪ್ರತಿಕ್ರಿಯೆ ಮಾಡುತ್ತಿರಲಿಲ್ಲ, ಹಣವನ್ನು ಕೊಡುತ್ತೇವೆಂದು ಹೇಳುತ್ತಾ ಬರುತ್ತಿದ್ದರು. ತಾನು ಸ್ವಲ್ಪ ಜೋರಾಗಿ ಮಾತನಾಡಿದಾಗ ನಿಮ್ಮ ಊರಿಗೆ ಬಂದು ಹಣವನ್ನು ಕೊಡುತ್ತೇವೆಂದು ಹೇಳಿದರು. ದಿನಾಂಕ 07–07–2015 ರಂದು ಸಂಜೆ 6.00 ಗಂಟೆಗೆ 1 ನೇ ಆರೋಪಿ ಮಂಜುನಾಥ ಫೋನ್ ಮಾಡಿ ಮೈಸೂರಿನ ರಾಣಿ ಪಾರ್ಕಗೆ ಬರಲು ಹೇಳಿದರು, ನಾನು ಪಾರ್ಕ ಗೆ ಸಾಯಂಕಾಲ 7.00 ರಿಂದ 7.15 ಗಂಟೆಗೆ ಬಂದೆನು. ನನ್ನ ಜೊತೆ ಕೆಲಸ ಮಾಡುತ್ತಿದ್ದ ನಂಜುಂಡಸ್ವಾಮಿಯವರು ಕೂಡ ಬಂದಿದ್ದರು. ನಾನು 1 ನೇ ಆರೋಪಿ ಮಂಜುನಾಥ ಇನ್ನೂ ಇಬ್ಬರಾದ ದುಂಡಪ್ಪ ಮೆಟ್ಟಪ್ಪ ಗಡ್ಕರಿ ಮತ್ತು ಸಂಗಪ್ಪ ಬಂಡಿ ಇವರುಗಳು ಬಂದಿದ್ದರು ಅವರ ಹತ್ತಿರ ಹೋದಾಗ 1 ನೇ ಆರೋಪಿ ಮಂಜುನಾಥ ಈತನು ತನ್ನ

ಶರ್ಟಿನ ಕೊರಳ ಪಟ್ಟಿಯನ್ನು ಹಿಡಿದು ನಿನಗೆ ಯಾವ ಹಣ ಕೊಡಬೇಕು ಎಂದು ತನ್ನ ಜೇಬಿನಿಂದ ಒಂದು ಪಿಸ್ತೂಲನ್ನು ತೆಗೆದು ನನ್ನ ಎದೆಗೆ ಹಚ್ಚಿದನು ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

5) ಫ್ರಾಸಾ–3 ಮಹದೇವ ಮೂರ್ತಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ಗಲಾಟೆ ಮಾಡಿದರೆ ನಿನಗೆ ಶೂಟ್ ಮಾಡುತ್ತೇನೆಂದು ಹೆದರಿಸಿದನು. ಕೈಯಿಂದ ಬೆನ್ನಿಗೆ, ಎದೆಗೆ, ಕಿವಿಗೆ ಗುದ್ದಿದನು. ಅವಾಚ್ಯ ಶಬ್ಬಗಳಿಂದ ನನಗೆ ಬೈದನು, ಆತನ ಜೊತೆ ಇದ್ದ ಇನ್ನೂ ಇಬ್ಬರು ನನ್ನನ್ನು ಹಿಡಿದುಕೊಂಡಿದ್ದರು. ತನ್ನ ಸ್ನೇಹಿತ ನಂಜುಂಡಸ್ವಾಮಿ ಇವರು ನನ್ನನ್ನು ಬಿಡಿಸಿಕೊಳ್ಳಲು ಪ್ರಯತ್ನ ಮಾಡಿದಾಗ ಆತನನ್ನು ಕೂಡ ದುಂಡಪ್ಪ ಮೆಟ್ಟಪ್ಪ ಗಡ್ಕರಿ ಮತ್ತು ಸಂಗಪ್ಪ ಬಂಡಿ ಇವರುಗಳು ಹಿಡಿದುಕೊಂಡರು. ತಾನು ಜೋರಾಗಿ ಕಿರುಚಿದಾಗ ಪಾರ್ಕನಲ್ಲಿ ವಾಯು ವಿಹಾರಕ್ಕೆ ಬಂದ ಜನಗಳು ಓಡಿ ಬರುತ್ತಿದ್ದಂತೆ ತನ್ನ ಕೊರಳಿನಲ್ಲಿದ್ದ ಚಿನ್ನದ ಚೈನನ್ನು 1 ನೇ ಆರೋಪಿ ಮಂಜುನಾಥ ಈತನು ಕಿತ್ತುಕೊಂಡು ಓಡಿ ಹೋದನು. ನಂತರ ತನ್ನನ್ನು ನೀರು ಕುಡಿಸಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆ ನಂತರ ತಾನು ಆಸ್ಪತ್ರೆಯಿಂದ ಮನೆಗೆ ಹೋಗಿ ವಿಶ್ರಾಂತಿ ಪಡೆದು ಮರು ದಿವಸ ನನ್ನ ಗೆಳೆಯರನ್ನು ಸಂಪರ್ಕಿಸಿ ದಾಗ ನನ್ನ ಗೆಳೆಯರು ಕೆಲವರು ಫಿರ್ಯಾದಿ ಕೊಡು ನಿನಗೆ ಸೇಫ್ಟಿ ಇರುತ್ತದೆ ಎಂದು ಹೇಳಿದರು, ಇನ್ನೂ ಕೆಲವರು ಫಿರ್ಯಾದಿ ಕೊಡಬೇಡ ಎಂದು ಹೇಳಿದರು. ನಾನು ಯೋಚನೆ ಮಾಡಿ ನನ್ನ ರಕ್ಷಣೆಗೋಸ್ಕರ ಒಂದು ಫಿರ್ಯಾದಿ ಕೊಡುವುದು ಒಳ್ಳೆಯದು ಎಂದು ಠಾಣೆಗೆ ಹೋಗಿ ಫಿರ್ಯಾದಿಯನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

6) ಫ್ರಾಸಾ–3 ಮಹದೇವ ಮೂರ್ತಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ನಂತರ ಪೊಲೀಸ್ ನವರು ಬಂದು ಸ್ಥಳದ ಮಹಜರನ್ನು ಮಾಡಿರುತ್ತಾರೆ. ನವೆಂಬರ್ 2015 ರಲ್ಲಿ ಆರೋಪಿಗಳನ್ನು ದಸ್ತಗಿರಿ ಮಾಡಿದ್ದೆವು ಎಂದು ಪೊಲೀಸ್ ನವರು ಕರೆಸಿದ್ದರು, ಪೊಲೀಸ್ ಠಾಣೆಗೆ ಹೋಗಿ ಆರೋಪಿ ಮಂಜುನಾಥ ಇವರನ್ನು ನೋಡಿ ಗುರುತಿಸಿರುತ್ತೇನೆ. ಠಾಣೆಯಲ್ಲಿದ್ದ ಬಂಗಾರದ ಚೈನು ಮತ್ತು ಪಿಸ್ತೂಲ್ ನ್ನು ನೋಡಿ ಗುರುತಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

7) ಫ್ರಾಸಾ–4 ನಂಜುಂಡಸ್ವಾಮಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಚಾ.ಸಾ.1 ಅವರು ನನ್ನ ಜೊತೆ ಪತ್ರಕರ್ತರಾಗಿ ಸುಮಾರು 15 ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ರೈಲ್ವೆ ಇಲಾಖೆಯಲ್ಲಿ ಕೆಲಸ ಕೊಡಿಸುವ ಸಂಬಂಧ ಚಾ.ಸಾ.1 ಮತ್ತು ಅವರ ಸ್ನೇಹಿತರು 1 ನೇ ಆರೋಪಿಗೆ ರೂ. 10,00,000/- ಗಳನ್ನು ಮುಂಗಡವಾಗಿ ಕೊಟ್ಟಿದ್ದರು. ಕೆಲಸ ಕೊಡಿಸದೇ ಇದ್ದ ಕಾರಣ ಹಣ ವಾಪಸ್ಸು ಮಾಡುವಂತೆ ಚಾ.ಸಾ.1 ಮತ್ತು ಅವರ ಸ್ನೇಹಿತರು 1 ನೇ ಆರೋಪಿಗೆ ಒತ್ತಾಯ ಮಾಡಿದ್ದರು. ಆರೋಪಿ ಹಣ ವಾಪಸ್ಸು ಮಾಡಲು ಸತಾಯಿಸುತ್ತಿದ್ದರು. ದಿನಾಂಕಃ 07.06.2015 ರಂದು ಸಂಜೆ 5.00 ರಿಂದ 5.30 ರ ವೇಳೆಗೆ ಆರೋಪಿಯು ಚಾ.ಸಾ.1 ರವರಿಗೆ ಹಣ ವಾಪಸ್ಸು ಮಾಡುವುದಾಗಿ ಫೋನ್ ಮಾಡಿ ನ್ಯಾಯಾಲಯದ ಮುಂಭಾಗ ಇರುವ ರಾಣಿ ಪಾರ್ಕಿಗೆ ಬರುವಂತೆ ಹೇಳಿದ್ದರು. ಸಂಜೆ 7.00 ರ ವೇಳೆಗೆ ನಾನು ಮತ್ತು ಚಾ.ಸಾ.1 ಅವರು ರಾಣಿ ಪಾರ್ಕಿಗೆ ಬಂದಾಗ ಸುಮಾರು 4 ರಿಂದ 5 ಜನ ವ್ಯಕ್ತಿಗಳು ಇದ್ದರು. ಚಾ.ಸಾ.1 ಅವರು 1 ನೇ ಆರೋಪಿಯ ಬಳಿ ಹಣ ವಾಪಸ್ಸು

ಕೊಡುವಂತೆ ಕೇಳಿದಾಗ ಸದರಿ ವ್ಯಕ್ತಿಗಳು ಚಾ.ಸಾ.1 ಅವರನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದು 1 ನೇ ಆರೋಪಿ ಚಾ.ಸಾ.1 ಅವರಿಗೆ ಯಾವುದೇ ಹಣ ವಾಪಸ್ಸು ಕೊಡುವುದು ಇಲ್ಲ ಎಂದು ಹಲ್ಲೆ ಮಾಡಿ ಗನ್ ನಿಂದ ಶೂಟ್ ಮಾಡುವುದಾಗ ಬೆದರಿಕೆ ಹಾಕಿದ್ದಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

8) ಫ್ರಾಸಾ–4 ನಂಜುಂಡಸ್ವಾಮಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ನಾನು ಬಿಡಿಸಲು ಹೋದಾಗ ಹೆಚ್ಚಿನ ಗಲಾಟೆ ಆದ ಕಾರಣ ಪಾರ್ಕನಲ್ಲಿ ಇದ್ದ ಬೇರೆ ಸಾರ್ವಜನಿಕರು ಸೇರಿದ್ದರು. ಆಗ 1 ನೇ ಆರೋಪಿ ಚಾ.ಸಾ.1 ಅವರಿಗೆ ಕೈನಿಂದ ಹಲ್ಲೆ ಮಾಡಿ ಕತ್ತಿನಲ್ಲಿ ಇದ್ದ ಚೈನನ್ನು ಕಿತ್ತುಕೊಂಡಿದ್ದಾರೆ. ಜನ ಸೇರಿದ ಕಾರಣ 1 ನೇ ಆರೋಪಿ ಮತ್ತು ಅವರ ಜೊತೆ ಇದ್ದ ವ್ಯಕ್ತಿಗಳು ಸ್ಥಳದಿಂದ ಓಡಿ ಹೋಗಿದ್ದಾರೆ. ಚಾ.ಸಾ.1 ಅವರ ಮೇಲೆ ಹಲ್ಲೆ ಮಾಡಿದ 1 ನೇ ಆರೋಪಿ ಮತ್ತು ಇತರ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಚೈನನ್ನು ನೋಡಿದರೆ ಗುರುತಿಸುತ್ತೇನೆ. ಚಾ.ಸಾ.1 ಅವರ ಮೇಲೆ ಹಲ್ಲೆ ಮಾಡಿದ ಪರಿಣಾಮ ಗಾಯಗಳು ಆಗಿದ್ದು ಚಾ.ಸಾ. ಅವರಿಗೆ ಕೆ ಆರ್ ಆಸ್ಪತ್ರೆ, ಮೈಸೂರಿನಲ್ಲಿ ಚಿಕಿತ್ಸೆ ಕೊಡಿಸಿ ಪೊಲೀಸ್ ಠಾಣೆಗೆ ಕರೆದುಕೊಂಡು ಬಿಟ್ಟಿದ್ದೇನೆ. ಘಟನೆ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

9) ಫ್ರಾಸಾ–5 ಎಲ್ವಿನ್ ಇವರು ತಮ್ಮ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಚಾ.ಸಾ.1 ಅವರು ತನಗೆ ಸುಮಾರು 13 ವರ್ಷಗಳಿಂದ ಪರಿಚಯ ಇದ್ದಾರೆ. 2010–2011 ನೇ ಸಾಲಿನಲ್ಲಿ ರೈಲ್ವೆ ಇಲಾಖೆಯಲ್ಲಿ ಡಿ– ಗ್ರೂಪ್ ಕೆಲಸಕ್ಕೆ

ತಾನು, ಚಾ.ಸಾ.1 ಮತ್ತು ಇತರೆ 4 ಜನರು ಅರ್ಜಿ ಸಲ್ಲಿಸಿದ್ದೆವು. ಅರ್ಜಿ ಹಾಕಿದ 3-4 ತಿಂಗಳ ನಂತರ ಕೆಲಸ ಕೊಡಿಸುವ ಸಂಬಂಧ ಚಾ.ಸಾ.1 ಅವರು ಎಲ್ಲರ ಪರವಾಗಿ ರೂ. 10,00,000/- ಗಳನ್ನು ಮುಂಗಡವಾಗಿ ಕೊಡುವಂತೆ ಹೇಳಿದ್ದರು. ತಾನು 1,00,000/-ಹಣವನ್ನು ಚಾ.ಸಾ.1 ಅವರಿಗೆ ಕೊಟ್ಟಿರುತ್ತೇನೆ. ಚಾ.ಸಾ.1 ಅವರು 5,00,000/- ಮತ್ತು ಉಳಿದ ಅರ್ಜಿದಾರರಿಂದ 4 ಲಕ್ಷ ರೂ. ಸೇರಿಸಿ ಒಟ್ಟು 10,00,000/- ರೂ.ಗಳನ್ನು ಚಾ.ಸಾ.5 ಅವರ ಮೂಲಕ 1 ನೇ ಆರೋಪಿಗೆ ಕೊಟ್ಟಿದ್ದಾರೆ. 6-7 ತಿಂಗಳು ಕಳೆದರೂ ಕೆಲಸ ಆಗಿರಲಿಲ್ಲ ಮತ್ತು ಹಣ ವಾಪಸ್ಸು ಮಾಡಿರಲಿಲ್ಲ. ಈ ಬಗ್ಗೆ ನಾನು ಚಾ.ಸಾ.1 ಅವರ ಬಳಿ ಕೇಳಲಾಗಿ ಚಾ.ಸಾ.1 ಅವರು ಚಾ.ಸಾ.5 ಅವರ ಬಳಿ ಕೇಳಿದಾಗ 2011 ಸಾಲಿನಲ್ಲಿ 1 ನೇ ಆರೋಪಿ 3,50,000/- ಹಣವನ್ನು ಚಾ.ಸಾ.5 ಅವರ ಬ್ಯಾಂಕ್ ಖಾತೆಗೆ ವಾಪಸ್ಸು ಹಾಕಿದ್ದಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

10) ಫ್ರಾಸಾ-5 ಎಲ್ವಿನ್ ಇವರು ತಮ್ಮ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ಬಾಕಿ ಉಳಿದ ಹಣ ವಾಪಸ್ಸು ಕೊಡುವಂತೆ ಕೇಳಿದಾಗ ದಿನಾಂಕಃ 07.06.2015 ರಂದು ಆರೋಪಿಯು ಚಾ.ಸಾ.1 ರವರಿಗೆ ಹಣ ವಾಪಸ್ಸು ಮಾಡುವುದಾಗಿ ಫೋನ್ ಮಾಡಿ ನ್ಯಾಯಾಲಯದ ಮುಂಭಾಗ ಇರುವ ರಾಣಿ ಪಾರ್ಕಿಗೆ ಬರುವಂತೆ ಹೇಳಿದ್ದರು. ಚಾ.ಸಾ.*1* ಮತ್ತು ಚಾ.ಸಾ.*2* ಅವರು ರಾಣಿ ಪಾರ್ಕಿಗೆ ಹೋದಾಗ *1* ನೇ ಆರೋಪಿ ಮತ್ತು ಇತರೆ ಇಬ್ಬರು ಚಾ.ಸಾ.*1* ಅವರ ಮೇಲೆ ಹಲ್ಲೆ ಮಾಡಿ ಗನ್ ತೋರಿಸಿ ಬೆದರಿಕೆ ಹಾಕಿದ ಬಗ್ಗೆ ತನಗೆ ದಿನಾಂಕಃ *08.06.2015* ರಂದು ತಿಳಿದಿದೆ. ಚಾ.ಸಾ.*1* ಅವರು *1* ನೇ ಆರೋಪಿಯನ್ನು ತನಗೆ ಪರಿಚಯ ಮಾಡಿಸಿದ್ದರು.

*1* ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಘಟನೆ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

11) ಪ್ರಾಸಾ–6 ಶ್ರೀಕಾಂತ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ತಾನು ಕಳೆದ *4* ವರ್ಷಗಳಿಂದ ಸಿ.ಟಿ ನೆಟ್ ವರ್ಕ ಚಾನೆಲ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ಕಳೆದ *4* ವರ್ಷಗಳಿಂದ ಚಾ.ಸಾ.*1* ಅವರ ಪರಿಚಯ ಇದೆ. *1* ನೇ ಆರೋಪಿಯ ಪರಿಚಯ ಇದೆ. *1* ನೇ ಆರೋಪಿಯ ಜೊತೆ ಇದ್ದ *2–3* ವ್ಯಕ್ತಿಗಳ ಪರಿಚಯ ಇದೆ. *2008* ರಿಂದ *2010* ರ ಅವಧಿಯಲ್ಲಿ ತನಗೆ ಸೇರಿದ ಟಾಟಾ ಸೊಮೋ ಮತ್ತು ಇಂಡಿಗೋ ವಾಹನಗಳನ್ನು ರೇಲ್ವೆ ಇಲಾಖೆಗೆ ಬಾಡಿಗೆ ಸಲುವಾಗಿ ಕೊಟ್ಟಿದ್ದೆ. ಬಾಡಿಗೆ ಹಣವನ್ನು ಪಡೆಯಲು ಬೆಂಗಳೂರಿನ ಕಂಟೋಮೆಂಟ್ ರೇಲ್ವೆ ಕಛೇರಿಗೆ ಹೋಗಬೇಕಿತ್ತು. *2008–2009* ನೇ ಸಾಲಿನಲ್ಲಿ *1* ನೇ ಆರೋಪಿ ಮತ್ತು ಆತನ ಇಬ್ಬರು ಸ್ನೇಹಿತರು ಬೆಂಗಳೂರಿನ ಕಂಟೋಮೆಂಟ್ ರೇಲ್ವೆ ಕ್ಯಾಂಟೀನ್ ನಲ್ಲಿ ಪರಿಚಯ ಆಗಿದ್ದರು. ಸದರಿ ವೇಳೆ ತಾನು ಕೆಲಸಕ್ಕೆ ಹುಡುಕುತ್ತಿದ್ದು ರೇಲ್ವೆ ಇಲಾಖೆಯಲ್ಲಿ ಕೆಲಸ ಕೊಡಿಸುವ ಸಲುವಾಗಿ 1 ನೇ ಆರೋಪಿ ತಲಾ ಅಭ್ಯರ್ಥಿಗಳಿಂದ 5,00,000/– (ಐದು ಲಕ್ಷ ) ರೂ. ಕೊಡುವಂತೆ ತನಗೆ ಚಾ.ಸಾ.1 ಮತ್ತು 3 ಅವರಿಗೆ ತಿಳಿಸಿದ್ದರು. ತಾನು, ಚಾ.ಸಾ.1 ಮತ್ತು ಇತರೆ 3 ಜನರು 2009–2010 ನೇ ಸಾಲಿನಲ್ಲಿ ಸೆಪ್ಟೆಂಬರ್ ನಿಂದ ಡಿಸೆಂಬರ್ ಅವಧಿಯಲ್ಲಿ ಬೆಂಗಳೂರಿನ ಗಾಂಧಿನಗರದಲ್ಲಿ 1 ನೇ ಆರೋಪಿ ಮತ್ತು ಅವರ ಜೊತೆ ಇದ್ದ ವ್ಯಕ್ತಿಗಳನ್ನು ಭೇಟಿ ಮಾಡಿದ್ದೇವೆ. ನಾನು ಸೇರಿದಂತೆ ಒಟ್ಟು 6 ಜನ ಇದ್ದು ತಲಾ 5 ಲಕ್ಷ ರೂ. ಗಳಂತೆ ಒಟ್ಟು 30 ಲಕ್ಷ ರೂ. ಗಳನ್ನು ಕೊಡುವಂತೆ ಹೇಳಿದ್ದರು. ತಲಾ 1 ಲಕ್ಷ ರೂ. ಮುಂಗಡವಾಗಿ ಮತ್ತು ಒಟ್ಟು 10 ಲಕ್ಷ ರೂ. ಗಳನ್ನು ಕೊಡುವಂತೆ 1 ನೇ ಆರೋಪಿ ತಿಳಿಸಿದ ಮೇರೆಗೆ 2009–2010 ನೇ ಸಾಲಿನಲ್ಲಿ

10 ಲಕ್ಷ ರೂ. ಗಳನ್ನು ನಾನು, ಚಾ.ಸಾ.1 ಮತ್ತು ಚಾ.ಸಾ.3 ಅವರು ಬೆಂಗಳೂರಿನ ವಿಧಾನಸೌಧದ ಪಾರ್ಕ ಬಳಿ ಕೊಟ್ಟಿದ್ದೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

**12)** ಫ್ರಾಸಾ–**6** ಶ್ರೀಕಾಂತ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು 1 ನೇ ಆರೋಪಿ ಕೆಲವು ದಿನಗಳ ನಂತರ ಕೆಲಸ ಆಗುವುದಾಗಿ ಚಾ.ಸಾ. 1 ಅವರಿಗೆ ಫೋನ್ ಮೂಲಕ ಹೇಳುತ್ತಿದ್ದರು ಮತ್ತು ನಂತರದಲ್ಲಿ 1 ನೇ ಆರೋಪಿ ತನ್ನ ಫೋನನ್ನು ಸ್ವಿಚ್ ಆಫ್ ಮಾಡಿದ್ದರು. ತಾನು ಮತ್ತು ಚಾ.ಸಾ.1 ಅವರು 1 ನೇ ಆರೋಪಿಯನ್ನು ಬೆಂಗಳೂರಿನಲ್ಲಿ ಮತ್ತು ಸವದತ್ತಿ ಊರಿನಲ್ಲಿ ಹುಡುಕಲಾಗಿ ಆತನು ಸಿಕ್ಕಿರುವುದಿಲ್ಲ. ನಂತರ ಕಾಂಗ್ರೇಸ್ ಮುಖಂಡ ಚಾ.ಸಾ.6 ಜಿ. ರವಿ ಅವರನ್ನು ಭೇಟಿ ಮಾಡಿ ವಿಚಾರವನ್ನು ತಿಳಿಸಿದೆವು. ಕಾಂಗ್ರೇಸ್ ಮುಖಂಡ ಚಾ.ಸಾ.6 ಜಿ. ರವಿ ಅವರಿಗೆ 1 ನೇ ಆರೋಪಿಯು ಬಹಳ ಜನರಿಗೆ ಮೋಸ ಮಾಡಿದ ವಿಚಾರ ತಿಳಿದು ಚಾ.ಸಾ.6 ಅವರು 1 ನೇ ಆರೋಪಿಯನ್ನು ಕರೆಯಿಸಿ ವಿಚಾರಿಸಲಾಗಿ 1 ನೇ ಆರೋಪಿಯು ಚಾ.ಸಾ.6 ಅವರ ಬ್ಯಾಂಕ್ ಖಾತೆಗೆ ಒಟ್ಟು 3 ಲಕ್ಷ 50 ಸಾವಿರವನ್ನು ಜಮಾ ಮಾಡಿದ್ದು ಉಳಿದ ಹಣವನ್ನು 2 ತಿಂಗಳ ಅವಧಿಯಲ್ಲಿ ಕೊಡುವುದಾಗಿ ಹೇಳಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

**13)** ಫ್ರಾಸಾ–**6** ಶ್ರೀಕಾಂತ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ಚಾ.ಸಾ.*1* ಅವರು *1* ನೇ ಆರೋಪಿಯನ್ನು ಫೋನ್ ಮೂಲಕ ಸಂಪರ್ಕ ಮಾಡಿದಾಗ *2015* ನೇ ಸಾಲಿನಲ್ಲಿ ನ್ಯಾಯಾಲಯದ ಸಂಕೀರ್ಣದ ಮುಂದೆ ಇರುವ ಪಾರ್ಕ ನಲ್ಲಿ ಚಾ.ಸಾ.*1* ಅವರನ್ನು ಕರೆಯಿಸಿ *1* ನೇ ಆರೋಪಿಯು ಹಲ್ಲೆ ಮಾಡಿದ ಬಗ್ಗೆ ಚಾ.ಸಾ.*1*

ಅವರು ತನಗೆ ವಿಷಯವನ್ನು ತಿಳಿಸಿದ್ದಾರೆ. ತಾನು, ಚಾ.ಸಾ.1 ಅವರಿಗೆ ದೂರು ನೀಡುವಂತೆ ಹೇಳಿದ್ದೇನೆ. ತಾನು, ಚಾ.ಸಾ.1, 3 ಮತ್ತು ಉಳಿದ 3 ಜನರು ಸೇರಿ ಒಟ್ಟು 10 ಲಕ್ಷ ರೂ.ಗಳನ್ನು 1ನೇ ಆರೋಪಿಗೆ ಕೊಟ್ಟಿದ್ದೇವೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

14) ಫ್ರಾಸಾ–7 ರವಿ ಜಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಚಾಸಾ–1 ಅವರು ತನಗೆ ಸುಮಾರು 13–14 ವರ್ಷಗಳಿಂದ ಗೊತ್ತು. ಚಾಸಾ–1 ಅವರು ಮೀಡಿಯಾದಲ್ಲಿ ಕೆಲಸ ಮಾಡುತ್ತಿದ್ದರು. 2010 ನೇ ಸಾಲಿನಲ್ಲಿ ಚಾಸಾ–1 ಮತ್ತು ಅವರ ಕೆಲವು ಸ್ನೆಹೀತರು ರೈಲ್ವೆ ಇಲಾಖೆಯಲ್ಲಿ ಉದ್ಯೋಗ ಸಲುವಾಗಿ ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯದಲ್ಲಿ ಹಾಜರು ಇರುವ 1ನೇ ಆರೋಪಿ ಮತ್ತು ಇತರೇ ಇಬ್ಬರು ಆರೋಪಿಗಳು ಕೆಲಸ ಕೊಡಿಸುವ ಸಲುವಾಗಿ ತಲಾ ಅಭ್ಯರ್ಥಿಗಳಿಂದ 5 ಲಕ್ಷ ರೂಪಾಯಿಗಳನ್ನು ಮತ್ತು ಮುಂಗಡವಾಗಿ 10 ಲಕ್ಷ ರೂಪಾಯಿಗಳನ್ನು ಕೊಡುವಂತೆ ತಿಳಿಸಿದ ಬಗ್ಗೆ ಚಾಸಾ–1 ಅವರು ನನಗೆ ತಿಳಿಸಿದ್ದರು. 1ನೇ ಆರೋಪಿ ಮತ್ತು ಇತರೇ ಆರೋಪಿಗಳು ಕೆಲಸ ಕೊಡಿಸಿರಲಿಲ್ಲ ಮತ್ತು ಹಣ ವಾಪಸ್ಸು ಕೊಟ್ಟಿರಲಿಲ್ಲ ಅದೇ ಕಾರಣ ಚಾಸಾ–1 ಅವರು ಹಣ ವಾಪಸ್ಸು ಕೊಡಿಸುವಂತೆ ತನಗೆ ಸಹಾಯ ಮಾಡುವಂತೆ ಹೇಳಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

15) ಫ್ರಾಸಾ–7 ರವಿ ಜಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು 2011 ನೇ ಸಾಲಿನಲ್ಲಿ 1ನೇ ಆರೋಪಿಯನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿ ಹಣ

ವಾಪಸ್ಸು ಕೊಡುವಂತೆ ಇಲ್ಲದಿದ್ದರೆ ಪೋಲಿಸರಿಗೆ ದೂರು ನೀಡುವ ಬಗ್ಗೆ ತಿಳಿಸಿದ್ದೇವು. ಚಾಸಾ–*1* ಅವರ ಹೆಸರಿನಲ್ಲಿ ಬ್ಯಾಂಕ್ ಖಾತೆ ಇರಲಿಲ್ಲ ಅದೇ ಕಾರಣ *2011* ರಲ್ಲಿ *1* ನೇ ಆರೋಪಿ ತನ್ನ ಬ್ಯಾಂಕ್ ಖಾತೆಗೆ *3* ವರೆ ಲಕ್ಷ ರೂಪಾಯಿ ಜಮಾ ಮಾಡಿದ್ದಾರೆ. ಸದರಿ ಹಣವನ್ನು ನಾನು ಬ್ಯಾಂಕ್ ಖಾತೆಯಿಂದ ಪಡೆದು ಚಾಸಾ–*1* ಮತ್ತು ಅವರ ಇಬ್ಬರು ಸ್ನೆಹೀತರಿಗೆ ವಾಪಸ್ಸು ಕೊಟ್ಟಿದ್ದೇನೆ. ಚಾಸಾ–*1* ಮತ್ತು ಅವರ ಸ್ನೇಹಿತರು ಬಾಕಿ ಉಳಿದ ಹಣವನ್ನು ಕೊಡುವಂತೆ ಆರೋಪಿಗಳ ಹತ್ತಿರ ಕೇಳಿದಾಗ ಕೊಟ್ಟಿರಲಿಲ್ಲ. *2015* ರಲ್ಲಿ ನ್ಯಾಯಾಲಯದ ಮುಂದೆ ಇರುವ ಪಾರ್ಕಿನಲ್ಲಿ *1* ನೇ ಆರೋಪಿ ಮತ್ತು ಚಾಸಾ–*1* ಅವರ ನಡುವೆ ಗಲಾಟೆ ಆದ ಬಗ್ಗೆ ತಿಳಿದಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

16) ಪ್ರಾಸಾ–7 ರವಿ ಜಿ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು *2015* ರಲ್ಲಿ ಲಕ್ಷ್ಮೀಪುರಂ ಪೊ.ಠಾಣೆ ಅವರು ತನಗೆ ಫೋನ್ ಮಾಡಿ ಕರೆಸಿಕೊಂಡು ಠಾಣೆಯಲ್ಲಿ ಇದ್ದ *1* ನೇ ಆರೋಪಿಯನ್ನು ತಾನು ಗುರುತಿಸಿದ್ದೇನೆ ಮತ್ತು ಹೇಳಿಕೆ ಕೊಟ್ಟಿದ್ದೇನೆ. ಬ್ಯಾಂಕ್ ಖಾತೆಯ ಕೊನೆಯ ಮೂರು ಸಂಖ್ಯೆ *997* ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

17) ಪ್ರಾಸಾ–9 ಡಾ. ಶಣ್ಮುಖ ಎಂ. ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿಃ*07.06.2015* ರಂದು ರಾತ್ರಿ *7.30*ರ ವೇಳೆಗೆ ಲಕ್ಷ್ಮಿಪುರಂ, ಮೈಸೂರು, ಕೋರ್ಟ್ ಮುಂಭಾಗ ಇರುವ ಪಾರ್ಕ್ ನಲ್ಲಿ *2* ರಿಂದ *3* ಜನ ಗೊತ್ತಿರುವ ವ್ಯಕ್ತಿಗಳು ತಮ್ಮ ಮೇಲೆ ಹಲ್ಲೆ ಮಾಡಿದ ಸಂಬಂದ ರಾತ್ರಿ*9.45*ರ ವೇಳೆಗೆ ಶ್ರೀ ಮಹದೇವ ಮೂರ್ತಿ. ಎಂ ಅವರು ತಮ್ಮ

ಮೇಲೆ ಆದ ಹಲ್ಲೆಯ ಇತಿಹಾಸ ದ ಮೇರೆಗೆ ತಮ್ಮ ಸ್ನೇಹಿತ ನಂಜುಂಡಸ್ವಾಮಿ ಅವರ ಜೊತೆ ಆಸ್ಪತ್ರೆಗೆ ಭೇಟಿ ನೀಡಿದ್ದು ತಾನು ಅವರನ್ನು ಪರಿಕ್ಷೀಸಲಾಗಿ ಅಮುಕಿದರೆ ಎದೆಯ ಮೇಲೆ ನೋವು ಕಂಡು ಬಂದಿದೆ. ಹೆಚ್ಚಿನ ಚಿಕಿತ್ಸೆ ಸಲುವಾಗಿ ಶ್ರಸ್ತ ಚಿಕಿತ್ಸಾ ವಿಭಾಗಕ್ಕೆ ಕಳುಹಿಸಿಕೊಟ್ಟಿದ್ದೇನೆ. ಶ್ರಸ್ತ ಚಿಕಿತ್ಸಾ ವಿಭಾಗದ ವರದಿಯ ಆಧಾರದ ಮೇಲೆ ತನ್ನ ಅಭಿಪ್ರಾಯದಂತೆ ಶ್ರೀ ಮಹದೇವ ಮೂರ್ತಿ. ಎಂ ಅವರಿಗೆ ಸಾಮಾನ್ಯ ಸ್ವರೂಪದ ಗಾಯ ಆಗಿದ್ದ ಬಗ್ಗೆ ಅಭಿಪ್ರಾಯ ಕೊಟ್ಟಿದ್ದೇನೆ. ತಳ್ಳಾಟ ಮಾಡಿ ಗುದ್ದಿದಾಗ ಈ ಮೇಲೆ ಹೇಳಿದ ನೋವು ಬರುವ ಸಾಧ್ಯತೆ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

18) ಫ್ರಾಸಾ–11 ಸಿ.ಎಸ್. ರಾಜು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ *02.11.2015* ರಂದು ಮೊ.ಸಂಖ್ಯೆ *56/15* ಪ್ರಕರಣದಲ್ಲಿ ಆರೋಪಿ ಪತ್ತೆಗೊಸ್ಕರ ಬೆಳಗ್ಗಾಗೆ ಹೋಗುವಂತೆ ಆದೇಶ ಮಾಡಿದ್ದರು. ಆ ಆದೇಶದ ಪ್ರಕಾರ ತಾನು, ಸುದೀಪ್ ಕುಮಾರ್, ಮೋಹನ್ ಕುಮಾರ್ ಮತ್ತು ಸಿದ್ದಪ್ಪಾಜಿ ಅವರನ್ನು ಕರೆದುಕೊಂಡು ರಾತ್ರಿ ಇಲ್ಲಿಂದ ಹೊರಟು ದಿಃ *03.11.2015* ರಂದು ಸವದತ್ತಿ ಪೊಲೀಸ್ ಠಾಣೆಗೆ ವರದಿ ಮಾಡಿ ಅಲ್ಲಿ ಆರೋಪಿತನಾದ ಮಂಜುನಾಥ ಇವರ ವಿಳಾಸವನ್ನು ವಿಚಾರಿಸಿದಾಗ ಬಾತ್ಮಿದಾರರು ತಮ್ಮನ್ನು ಉಗರಗೊಳ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದರು. ತಾವು ಮಂಜುನಾಥ ಅವರ ಮನೆಯಲ್ಲಿ ವಿಚಾರಿಸಿದಾಗ ಅವರು ಮನೆಯಲ್ಲಿ ಇರಲಿಲ್ಲ ಕೆಲಸಕ್ಕೆ ಹೋಗಿದ್ದಾರೆ ಎಂದು ಹೇಳಿದ್ದರು. ಅದೇ ಗ್ರಾಮದಲ್ಲಿ ಸಂಜೆ *6* ಗಂಟೆ ವರೆಗೆ ಕಾಯುತ್ತಿದ್ದು ಸಂಜೆ *6* ಗಂಟೆಗೆ ಮನೆಗೆ ಬರುತ್ತಿದ್ದ ಮಂಜುನಾಥ ಇವರನ್ನು ಬಾತ್ಮಿದಾರರು ತೋರಿಸಿದ್ದರಿಂದ ಅವರನ್ನು ವಿಚಾರಿಸಿದಾಗ ಅವರು ತಾವೇ ಮಂಜುನಾಥ

ಎಂದು ಹೇಳಿದ್ದರು. ಆ ಕಾಲಕ್ಕೆ ಮಂಜುನಾಥ ಇವರನ್ನು ಇನ್ನಿಬ್ಬರು ಆರೋಪಿತರನ್ನು ವಿಚಾರಿಸಿದಾಗ ಅವರು ಬೇರೆ ಊರಿನವರು ಎಂದು ಗೊತ್ತಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

19) ಫ್ರಾಸಾ–11 ಸಿ.ಎಸ್. ರಾಜು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ನಂತರ ಮಂಜುನಾಥ ಇವರನ್ನು ಸವದತ್ತಿ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಅಧಿಕಾರಿಗಳ ಮುಂದೆ ಹಾಜರು ಮಾಡಿ ಅಲ್ಲಿಂದ ಮೈಸೂರಿಗೆ ಕರೆದುಕೊಂಡು ಬಂದಿದ್ದೇವು. ದಿಃ *04.11.2015* ರಂದು ಬೆಳಗ್ಗೆ ಲಕ್ಷ್ಮಿಪುರಂ ಪೊಲೀಸ್ ಠಾಣೆಗೆ ಹಾಜರು ಪಡಿಸಿದ್ದೆವು. ಉಗರಗೊಳ ಗ್ರಾಮದಲ್ಲಿ ಆರೋಪಿತನನ್ನು ವಿಚಾರಿಸಿದಾಗ ಅವರು ಈ ಪ್ರಕರಣದ ಬಗ್ಗೆ ಒಪ್ಪಿಕೊಂಡು ಬಂದಿದ್ದರು. ಆರೋಪಿತನನ್ನು ಹಾಜರು ಪಡಿಸಿದ ಬಗ್ಗೆ ವರದಿ ಸಲ್ಲಿಸಿದ್ದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

20) ಫ್ರಾಸಾ–14 ಎಕನಗೌಡ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಆರೋಪಿತನ ಪರಿಚಯ ಇದೆ. ಆರೋಪಿತ ತನ್ನ ಸೋದರ ಸಂಬಂಧಿ ಇದ್ದು ಆತನ ಮನೆಯಲ್ಲಿ ಅಂದಾಜು *7* ವರ್ಷಗಳ ಹಿಂದೆ ಒಂದು ಪಿಸ್ತೂಲ್ ಇದ್ದು ಅದನ್ನು ಪೊಲೀಸ್ ಇನ್ಸ್ ಪೆಕ್ಟರ್ ವಶಕ್ಕೆ ಪಡೆದಿದ್ದರು. ಆ ಪಿಸ್ತೂಲ್ ಆರೋಪಿತನ ಮನೆಯಲ್ಲಿದ್ದ ಬೀರುನಲ್ಲಿದ್ದ ಒಂದು ಪ್ರತ್ಯೇಕ ಲಾಕರ್ ನಲ್ಲಿ ಇತ್ತು. ಆ ಪಿಸ್ತೂಲ್ ಜೊತೆಯಲ್ಲಿ ಆ ಪಿಸ್ತೂಲ್ ಗೆ ಸಂಬಂದಪಟ್ಟ ಲೈಸನ್ಸ್ ಸಹ ಇತ್ತು. ಆ ಲೈಸನ್ಸ್ ಆರೋಪಿತನ ಹೆಸರನಲ್ಲಿ ಇತ್ತು. ಆ ಪಿಸ್ತೂಲ್ ಅನ್ನು ಮೈಸೂರಿನ ಲಕ್ಷ್ಮಿಪುರಂ ಪೋಲಿಸರ ಮುಂದೆ ಆರೋಪಿತನೇ

ಹಾಜರುಪಡಿಸಿದ್ದ ಮತ್ತು ಅದನ್ನು ಅವರು ಜಪ್ತಿ ಮಾಡಿದ್ದರು. ಆ ಪಿಸ್ತೂಲ್ ಲೈಸನ್ಸ್ ಅನ್ನು ಬೆಳಗಾವಿಯ ಡಿ.ಸಿ ಕಛೇರಿಯಿಂದ ಪಡೆಯಲಾಗಿತ್ತು. ಆ ಕಾಲಕ್ಕೆ ಅಂದಾಜು *2* ತಾಸಿನ ವರೆಗೆ ಮಹಜರ್ ಮಾಡಿ ನನ್ನ ಸಹಿ ಪಡೆದಿದ್ದರು. ಆ ಮಹಜರ್ ಕಾಲಕ್ಕೆ ತಾನು ಮತ್ತು ಇನ್ನೊಬ್ಬರು ಪರಸನಗೌಡ ಎನ್ನುವವರು ಸಹಿ ಹಾಕಿದ್ದೆವು. ಆ ಪಿಸ್ತೂಲ್ ನಿಂದ ಆರೋಪಿತ ಯಾರಿಗೋ ಶೂಟ್ ಮಾಡಿ ದಾಖಲಾಗಿದ್ದ ಪ್ರಕರಣದಲ್ಲಿ ತನಿಖೆ ಸಲುವಾಗಿ ಆ ಪಿಸ್ತೂಲ್ ಅನ್ನು ವಶಕ್ಕೆ ಪಡೆಯುತ್ತಿರುವುದಾಗಿ ಪೋಲೀಸ್ ಆ ಕಾಲಕ್ಕೆ ಹೇಳಿದ್ದರು. ಮಹಜರ್ ಕಾಲಕ್ಕೆ ಪೋಲೀಸ್ ಆರೋಪಿತನನ್ನು ಅಲ್ಲಿಗೆ ಕರೆದುಕೊಂಡು ಬಂದಿದ್ದರು. ಈ ಎಲ್ಲಾ ವಿಷಯದ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

21) ಫ್ರಾಸಾ–15 ಪಿ.ಎಂ. ಸಿದ್ದರಾಜು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ *08.06.2015* ರಂದು ಸಂಜೆ *8.00* ಗಂಟೆ ಸುಮಾರಿಗೆ ಪಿರ್ಯಾದಿ ಮಹದೇವಮೂರ್ತಿ ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದುಕೊಂಡು ಠಾಣಾ ಮೊ.ಸಂಖ್ಯೆ *56/2015* ಕಲಂ *341, 323, 392, 420, 504, 506* ಸಹ ಕಲಂ *34* ಐಪಿಸಿ ರೀತ್ಯ ಪ್ರಕರಣವನ್ನು ದಾಖಲೆ ಮಾಡಿಕೊಂಡು ಪ್ರ.ವ. ವರದಿಯನ್ನು ಮತ್ತು ದೂರನ್ನು ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೆನು. ದಿನಾಂಕ *09.06.2015* ರಂದು ಪಂಚಾಯಿತಿದಾರರಾದ ಮೊಹಮ್ಮದ್ ಅಜರ್ ಉದ್ದೀನ್ ಮತ್ತು ಮಹೇಶ್ವರ್ ಅವರಿಗೆ ಕೃತ್ಯ ನಡೆದ ಬಗ್ಗೆ ತಿಳಿಸಿ ಪಂಚರಾಗಲು ಕೇಳಿಕೊಂಡಿದ್ದು ಅವರಿಗೆ ನೊಟೀಸ್ ನೀಡಿ ಅವರ ಸಮಕ್ಷಮ ಪಂಚನಾಮೆ ಕ್ರಮವನ್ನು ಪಿರ್ಯಾದಿದಾರರು ತೋರಿಸಿದ ಕೃತ್ಯ ನಡೆದ

ಸ್ಥಳದಲ್ಲಿ ಬೆಳಗ್ಗೆ *8.30* ರಿಂದ *9.30* ರವರೆಗೆ ಮಾಡಿದ್ದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

22) ಪ್ರಾಸಾ–15 ಪಿ.ಎಂ. ಸಿದ್ದರಾಜು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ಆರೋಪಿತನ ಪತ್ತೆ ಬಗ್ಗೆ ಸಿಬ್ಬಂದಿಗಳನ್ನು ನೇಮಿಸಿದ್ದು ದಿನಾಂಕ *02.11.2015* ರಂದು ಸಿಬ್ಬಂದಿಗಳಾದ ರಾಜು, ಸುದೀಪ್ ಕುಮಾರ್ , ಸಿದ್ದಪ್ಪಾಜಿ ಮತ್ತು ಮೋಹನ್ ಕುಮಾರ್ ಅವರು ಆರೋಪಿ ಪತ್ತೆಗೆ ಹೋಗಿದ್ದು ದಿನಾಂಕ *04.11.2015* ರಂದು ಸಿಬ್ಬಂದಿಗಳು *1* ನೇ ಆರೋಪಿತನನ್ನು ವಶಕ್ಕೆ ಪಡೆದುಕೊಂಡು ಹಾಜರುಪಡಿಸಿದ್ದು ನಾನು *1* ನೇ ಆರೋಪಿಯನ್ನು ವಿಚಾರಣೆ ಮಾಡಿ ಆರೋಪಿತನ ಸ್ವ–ಇಚ್ಚಾ ಹೇಳಿಕೆಯನ್ನು ಪಡೆದುಕೊಂಡು ಆರೋಪಿಯ ಕಡೆಯಿಂದ ಕೃತ್ಯದ ಸಮಯದಲ್ಲಿ ಕಳವು ಮಾಡಿದ್ದ *15* ಗ್ರಾಂ ಚಿನ್ನದ ಸರವನ್ನು ಪಂಚರಾದ ಮಹೇಶ ಮತ್ತು ರಾಘವೇಂದ್ರ ಅವರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದೆನು. ಆರೋಪಿತನು ಸ್ವ–ಇಚ್ಚಾ ಹೇಳಿಕೆಯಲ್ಲಿ ಚಿನ್ನದ ಸರವನ್ನು ಕತ್ತಿನಲ್ಲಿ ಹಾಕಿಕೊಂಡಿದ್ದೇನೆ ಮತ್ತು ಗನ್ ಅನ್ನು ಊರಿನಲ್ಲಿ ಇಟ್ಟಿರುತ್ತೇನೆ ಜೊತೆಯಲ್ಲಿ ಬಂದರೆ ತೋರಿಸುತ್ತೇನೆ ಎಂದು ಹೇಳಿದ್ದನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

23) ಪ್ರಾಸಾ–15 ಪಿ.ಎಂ. ಸಿದ್ದರಾಜು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ಆರೋಪಿತನನ್ನು ಸಿಬ್ಬಂದಿಗಳ ಬೆಂಗಾವಲಿನಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆನು. ಆರೋಪಿತನನ್ನು ಹಾಜರುಪಡಿಸಿ ಸಿಬ್ಬಂದಿಯವರು ವರದಿ ನೀಡಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. ದೂರನ್ನು ಕೊಡುವ ವೇಳೆಯಲ್ಲಿ

ಕೈತಪ್ಪಿನಿಂದ ಕೃತ್ಯ ನಡೆದ ವೇಳೆಯಲ್ಲಿ ಆರೋಪಿತನು ಪಿಸ್ತೂಲು ತೋರಿಸಿ ಹೆದರಿಸಿದ ಬಗ್ಗೆ ದೂರಿನಲ್ಲಿ ಹೇಳಿರಲಿಲ್ಲವಾದ್ದರಿಂದ ಪಿರ್ಯಾದುದಾರರ ಮರುಹೇಳಿಕೆಯನ್ನು ಪಡೆದುಕೊಂಡಿದ್ದೆನು. ದಿನಾಂಕ *15.11.2015* ರಂದು ಆರೋಪಿತನನ್ನು ನ್ಯಾಯಾಲಯದಿಂದ ವಶಕ್ಕೆ ಪಡೆದುಕೊಂಡು ಆರೋಪಿತನನ್ನು ಕರೆದುಕೊಂಡು ಬೆಳಗಾಂ ಜಿಲ್ಲೆಯ ಸವದತ್ತಿ ಗ್ರಾಮಕ್ಕೆ ಹೋಗಿದ್ದು ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆದುಕೊಂಡಿದ್ದು ಆರೋಪಿತನ ಮನೆಯಲ್ಲಿ ಆರೋಪಿತ ಬಚ್ಚಿಟ್ಟಿದ್ದ ಗನ್ ಅನ್ನು ಆರೋಪಿತ ತೋರಿಸಿದ್ದು ಅದನ್ನು ಪಂಚರಾದ ಚಾಸಾ-*11* ಮತ್ತು *12* ರವರ ಸಮಕ್ಷಮ ಅಮಾನತ್ತುಪಡಿಸಿಕೊಂಡಿದ್ದೆನು. ಅಮಾನತ್ತು ಪಂಚನಾಮೆಯನ್ನು ದಿನಾಂಕ *16.11.2015* ರಂದು ಮಧ್ಯಾಹ್ನ *12.50* ರಿಂದ *2.30* ಗಂಟೆಯವರೆಗೆ ಮಾಡಿದ್ದೆನು. ಪುನಃ ಆರೋಪಿತನೊಂದಿಗೆ ವಾಪಸ್ಸು ಮೈಸೂರಿಗೆ ಬಂದು ಗನ್ ಮತ್ತು ಲೈಸನ್ಸ್ ಬಗ್ಗೆ ಮಾಲು ಪಟ್ಟಿ ಸಂಖ್ಯೆ ***66A/2015*** ರಂತೆ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

24) ಪ್ರಾಸಾ-15 ಪಿ.ಎಂ. ಸಿದ್ದರಾಜು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ಆರೋಪಿತನನ್ನು ಗನ್ ಅನ್ನು ಹೊಂದಲು ಲೈಸನ್ಸ್ ಏನಾದರೂ ಹೊಂದಿದ್ದೀಯಾ ಎಂದು ಕೇಳಿದ್ದಕ್ಕೆ ಆತನು ಲೈಸನ್ಸ್ ಹಾಜರುಪಡಿಸಿದ್ದನು. ಅದನ್ನು ನಿಪಿ-*5*ರ ಮಹಜರ್ ಅಡಿಯಲ್ಲಿ ಅಮಾನತ್ತು ಪಡಿಸಿಕೊಂಡಿದ್ದೆನು. ಆರೋಪಿತನು ತನಿಖೆಗೆ ಅವಶ್ಯಕತೆ ಇದ್ದುದರಿಂದ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆನು. ನಂತರ ಸಾಕ್ಷಿದಾರರಾದ ನಾರಾಯಣ, ಎಲ್ವಿನ್, ಶ್ರೀಕಾಂತ್, ರವಿ, ಮಹೇಶ್ವರ್, ರಾಘವೇಂದ್ರ, ಎಕ್ಕನಗೌಡ, ಪರಪ್ಪನಗೌಡ ಮತ್ತು ಸಿಬ್ಬಂದಿಯವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆನು.

ನಂಜುಂಡಸ್ವಾಮಿ ರವರ ಹೇಳಿಕೆಯನ್ನು ಸಹ ಪಡೆದುಕೊಂಡಿದ್ದೆನು. ಸವದತ್ತಿ ಮತ್ತು ಬೆಳಗಾಂ ಜಿಲ್ಲಾಧಿಕಾರಿಯವರಿಂದ ಆರೋಪಿತನಿಗೆ ಸಂಬಂಧಪಟ್ಟ ಮತ್ತು ಕೃತ್ಯಕ್ಕೆ ಬಳಸಿದ್ದ ಗನ್ ನ ಬಗ್ಗೆ ಲಿಖಿತ ಮಾಹಿತಿ ಪಡೆದುಕೊಂಡಿದ್ದೆನು. ಆರೋಪಿತನು ಜಿ.ರವಿ ಎಂಬುವ ಸಾಕ್ಷಿದಾರರ ಬ್ಯಾಂಕ್ ಖಾತೆಗೆ *3,50,000/-* ರೂಪಾಯಿ ಹಾಕಿದ್ದು ಆ ಬಗ್ಗೆ ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ಪಡೆದುಕೊಂಡಿದ್ದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

25) ಫ್ರಾಸಾ-15 ಪಿ.ಎಂ. ಸಿದ್ದರಾಜು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಮುಂದುವರೆದು ಪಿರ್ಯಾದುದಾರರು ರೈಲ್ವೆ ಪರೀಕ್ಷೆಗೆ ಕುಳಿತ ಬಗ್ಗೆ ಹಾಲ್ ಟಿಕೇಟ್ ನಕಲನ್ನು ಪಡೆದುಕೊಂಡಿದ್ದೆನು. ಸವದತ್ತಿ ಪೊಲೀಸ್ ಠಾಣೆಯವರು ಆರೋಪಿತನು ಪ್ರಕರಣದಲ್ಲಿ ಇದ್ದ ಬಗ್ಗೆ ಲಿಖಿತ ಮಾಹಿತಿಯನ್ನು ಕೊಟ್ಟಿದ್ದರು. ತಾನು ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ತನಿಖೆ ಪೂರ್ಣಗೊಂಡಿದ್ದರಿಂದ ದಿನಾಂಕ *25.02.2017* ರಂದು ನ್ಯಾಯಾಲಯಕ್ಕೆ ದೋಷರೋಪಣಾ ಪತ್ರವನ್ನು ಸಲ್ಲಿಸಿದ್ದೆನುಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಸಮಜಾಯಿಷಿ ಏನು?

ಉತ್ತರ –ಆ)

26) ನಿಮ್ಮ ಪರವಾಗಿ ಏನಾದರೂ ಹೇಳುವುದು ಇದೆಯೇ ?

ಉತ್ತರ – ಆ )

27) ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರೋ ಹೇಗೆ ?

ಉತ್ತರ – ಆ )

**(ಸಾಕ್ಷಿದಾರರ ಸಾಕ್ಷವನ್ನು ಆರೋಪಿಗೆ ಓದಿ ತಿಳಿಸಿ ಹೇಳಿದ್ದು, ಆರೋಪಿಗಳು ಸ್ವತಃ ಹೇಳಿಕೆ ನೀಡಿದ ರೀತಿಯಲ್ಲಿಯೇ ಅವರ ಉತ್ತರಗಳನ್ನು ಈ ದಿನ ಅಂದರೆ ದಿನಾಂಕ 13.03.2026 ರಂದು ಪಡೆದುಕೊಳ್ಳಲಾಗಿದೆ.)**

( ಪಿ ಜೆ ಸೋಮಶೇಖರ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಮೈಸೂರು.